ಈ) ಇಲ್ಲಿಯ ಜನರಿಗೆ ನೀಡಲಾಗಿರುವ ಹಕ್ಕುಪತ್ರಗಳೆಷ್ಟು? ಇನ್ನು ನೀಡಬೇಕಾದ ಬಾಕಿ ಎಷ್ಟು?

ಉ) ಕೊಳಚೆ ಪ್ರದೇಶದ ಜನರ ಅಭಿವೃದ್ಧಿಗೋಸ್ಕರ ಮಂಡಳಿ ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ.

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಮಂಗಳೂರು ನಗರ, ಸುರತ್ಕಲ್ ಮಧ್ಯ ಕುತ್ತೆತ್ತೂರು, ಇಡ್ಯಾ, ಹೊಸಬೆಟ್ಟು, ಬಾಳ, ಕುಳ್ಯಾ, ತೋಕೂರು, ಕೆಂಜೂರು, ಬೈಕಂಪಾಡಿ, ಪಣಂಬೂರು, ತಣ್ಣೀರುಬಾವಿ, ಪಡುಕೋಡಿ, ಬಂಗ್ರಾಕೊಳೂರು, ಪಂಜಿಮೊಗರು, ಕುಂಜತ್ತಬೈಲು, ಕಾವೂರು, ದೇರೆಬೈಲು, ಮರಕಡ, ಪಡುಶೆಡ್ಡೆ, ಮೂಡುಶೆಡ್ಡ, ಪಚ್ಚನಾಡಿ, ಪದವು, ಕುಡುಪು, ಅಳವೆ, ಪುರೋಳಿ, ಕಂಕನಾಡಿ, ಜಪ್ಪಿನಮೊಗರು ಬಜಾರ್, ಬೋಳಾರು, ಕದ್ರಿ, ಅಂಬ್ಲಮೊಗರು, ಮುನ್ನೂರು, ಪೆರ್ಮನ್ನೂರು, ಉಳ್ಳಾಲ, ಸೋಮೇಶ್ವರ್, ಬೆಳ್ಳ, ಕೋಟಿಕಾರು ಸಂಪೂರ್ಣ ಗ್ರಾಮಗಳು, ಮಳವೂರು ತಿರುಪೈಲ್‌ನೀರು ಮಾರ್ಗ, ಕಣ್ಯೂರು ಭಾಗಶಃ ಗ್ರಾಮಗಳು ನೋರ್ತ್‌ಸ್ಯಾಂಡ್ ಪಿಟ್ (ಮಂಗಳೂರು ತೋಟ, ಬೋಳೂರು, ಕಸ್ಬಾ, ತಣ್ಣೀರ್‌ಬಾವಿ, ನಾಯರ್‌ಕುದುರು ಸೇರಿ ಈ ಪ್ರದೇಶದ ಸಂಪೂರ್ಣ ಪ್ರದೇಶಗಳು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಾಗಿವೆ.

ಆ) ಇತ್ತೀಚಿಗೆ ಯಾವುದೇ ಹೆಚ್ಚುವರಿ ಪ್ರದೇಶವು ಸೇರ್ಪಡೆಗೊಂಡಿರುವುದಿಲ್ಲ.

ಇ) ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಅಧಿಸೂಚಿತಗೊಂಡಿರುವ ಕೊಳಚೆ ಪ್ರದೇಶಗಳು ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಕೊಳಚೆ ಪ್ರದೇಶದ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರವು ಕೊಳಚೆ ಅಭಿವೃದ್ಧಿ ಸೆಸ್ ಅನ್ನು ವಿಧಿಸಲು ಆದೇಶವನ್ನು ಹೊರಡಿಸಿದೆ. ಈ ರೀತಿ ಸಂಗ್ರಹಿಸುವ ಕೊಳಚೆ ಅಭಿವೃದ್ಧಿ ಸೆಸ್ ಅನ್ನು ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ: ನಗರಸಭೆ: ಪುರಸಭೆ: ಸ್ಥಳೀಯ ಪ್ರಾಧಿಕಾರಗಳು ಅನುಕ್ರಮವಾಗಿ ಶೇ. 70 ಮತ್ತು 30ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಳ್ಳುತ್ತದೆ ಮತ್ತು ಈ ಹಣವನ್ನು ಅವರ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲಾಗುತ್ತದೆ.

ವಿಷಯ:- ಬೆಂಗಳೂರು ನಗರದ ಸಮೀಪದಲ್ಲಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 505 (378)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಮೀಪದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸಲು ಅಂತಿಮ ತೀರ್ಮಾನವಾಗರುವುದೇ ಮತ್ತು ಸ್ಥಾಪನೆಗೆ ಬೇಕಾಗುವ ಜಮೀನನ್ನು ವಶಪಡಿಸಿಕೊಳ್ಳಲಾಗಿದೆಯೇ ಹಾಗೂ ಸದರಿ ಜಮೀನಿನ ವಿಸ್ತೀರ್ಣವೇನು?

ಆ) ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಈಗಿನ ಅಂದಾಜಿನಂತೆ ಎಷ್ಟು ವೆಚ್ಚ ತಗಲುತ್ತದೆ ಅದರಲ್ಲಿ ರಾಜ್ಯ ಸರ್ಕಾರದ ಪಾಲೇನಾದರೂ ಇದೆಯೇ?

ಇ) ಹಾಗಿದ್ದಲ್ಲಿ ರಾಜ್ಯ ಸರ್ಕಾರದ ಪಾತ್ರವೇನು ಮತ್ತು ಇದರ ನಿರ್ವಹಣೆಯನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತದೆಯೇ?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) ಬೆಂಗಳೂರಿನ ಸಮೀಪದ ದೇವನಹಳ್ಳಿಯಲ್ಲಿ ಹೊಸ ನವೀನ ಮಾದರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಕೆಎಸ್ಐಐಡಿಸಿ.ಯು ಟಾಟಾ - ರೇಥಿಯಾನ್ - ಸಿಂಗಪುರ್ ಗುಂಪಿನ (ಟಾ.ರೇ.ಸಿ) ಸಂಘದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಈ ಒಡಂಬಡಿಕೆಯ ಆಧಾರದ ಮೇಲೆ, ಟಾ.ರೇ.ಸಿ. ಸಂಘದವರು ವಿವರವಾದ ಟೆಕ್ನೊ ಎಕನಾಮಿಕ್ ಫಿಸಿಬಿಲಿಟಿ ವರದಿಯನ್ನು ಇತ್ತೀಚೆಗಷ್ಟೇ ಒಪ್ಪಿಸಿರುತ್ತಾರೆ. ಈ ವರದಿಯನ್ನು ಪರಿಶೀಲಿಸಬೇಕಾಗಿದೆ ಹಾಗೂ ಅದರಲ್ಲಿರುವಂತಹ ಮುಖ್ಯ ಅಂಶಗಳ ಬಗ್ಗೆ ವಿವರವಾಗಿ ವಿಚಾರ ಮಾಡಬೇಕಾಗಿದೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ ಅಂಶಗಳನ್ನು ಅವರ ಜೊತೆಯಲ್ಲಿ ಚರ್ಚಿಸಬೇಕಾಗಿದೆ. ಈ ಎಲ್ಲಾ ಕಾರ್ಯಗಳು ಮುಗಿದ ನಂತರವೇ ಒಂದು ಒಪ್ಪಂದದ ಮೂಲಕ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ವಿಮಾನ ನಿಲ್ದಾಣಕ್ಕೆ ಬೇಕಾಗಿರುವ ಜಮೀನನ್ನು ವಶಪಡಿಸಿಕೊಳ್ಳಲಾಗುತ್ತಿದೆ ಹಾಗೂ ಈ ಕ್ರಿಯೆಯು ಅಂತಿಮ ಹಂತ ತಲುಪಿದೆ. ಇದಕ್ಕಾಗಿ 4227 ಎಕರೆ 6.5 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲು ಗುರುತಿಸಲಾಗಿದೆ. ಆದಾಗ್ಯೂ ಮಾಸ್ಟರ್ ಪ್ಲಾನ್ ಮತ್ತು ಟೆಕ್ನೊ ಏಕನಾಮಿಕ್ ಫಿಸಿಬಿಲಿಟಿ ವರದಿಯನ್ನು ವಿವರವಾಗಿ ಪರಿಶೀಲಿಸಿದ (ಮೌಲ್ಯಮಾಪನ) ನಂತರವೇ ಈ ಯೋಜನೆಗೆ ಹಸ್ತಾಂತರ ಮಾಡಬೇಕಾಗಿರುವ ಜಮೀನಿನ ವಿಸ್ತೀರ್ಣ ಖಚಿತಗೊಳ್ಳುತ್ತದೆ ಹಾಗೂ ಈ ಕ್ಷೇತ್ರದಲ್ಲಿ ಪ್ರವೀಣರಾದ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯರವರ ಸಲಹೆಯನ್ನು ಪಡೆಯಲಾಗುವುದು.

ಆ) ಟಾ.ರೇ.ಸಿ.ಯವರಿಂದ ಪಡೆದಿರುವ ಟೆಕ್ನೊ ಏಕನಾಮಿಕ್ ಫಿಸಿಬಿಲಿಟಿ ವರದಿಯ ಪ್ರಕಾರ ಫೇಸ್ - 1ರ ಯೋಜನೆಗೆ ರೂ.1212 ಕೋಟಿ ಎಂದು ಅಂದಾಜು

ಮಾಡಲಾಗಿದೆ. ಆದಾಗ್ಯೂ ಈ ಟೆಕ್ನೊಎಕನಾಮಿಕ್ ಫಿಸಿಬಿಲಿಟಿ ವರದಿಯನ್ನು ಪರಿಶೀಲಿಸಬೇಕಾಗಿದೆ ಹಾಗೂ ಇದನ್ನು ಇನ್ನೂ ಒಪ್ಪಿಕೊಳ್ಳಬೇಕಾಗಿದೆ.

ಸರ್ಕಾರವು ಈ ಯೋಜನೆಯಲ್ಲಿ ಒಟ್ಟು ಈಕ್ವಿಟಿಯ ಶೇ. 11ರಿಂದ 26ರವರೆಗೆ ಭಾಗವಹಿಸಲು ನಿರ್ಧರಿಸಿದೆ. ಆದರೆ ಈ ಶೇ. 11ರಿಂದ 26ರ ಪರಿಮಿತಿಯಲ್ಲಿ ಎಷ್ಟು ಭಾಗವಹಿಸುವುದು ಎಂಬುದರ ಬಗ್ಗೆ ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.

ಇ) ವಿಮಾನ ನಿಲ್ದಾಣ ಒಂದು ಮುಖ್ಯವಾದ ಮೂಲಭೂತ ಸೌಕರ್ಯವಾಗಿದೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ವಿಸ್ತಾರಗೊಳ್ಳುತ್ತಿರುವ ಆರ್ಥಿಕ ಚಟುವಟಿಕೆಗಳಿಂದ ಹೆಚ್ಚುತ್ತಿರುವ ವಾಯು ಸಾರಿಗೆ ಬೇಡಿಕೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿ ಹೊಸ ನವೀನ ಮಾದರಿಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸೌಕರ್ಯವನ್ನು ಒದಗಿಸಲು ಸಹಾಯಕವಾದ ಕ್ರಮ ತೆಗೆದುಕೊಳ್ಳುತ್ತಿರುವುದು. ವಿಮಾನ ನಿಲ್ದಾಣಕ್ಕಾಗಿ ಪ್ರವೀಣರ ಸಮಿತಿಯು ಗುರುತಿಸಿರುವ ಜಮೀನನ್ನು ವಶಪಡಿಸಿಕೊಳ್ಳುವುದಲ್ಲದೆ, ಅವಶ್ಯಕವಾದ ಮೂಲಭೂತ ಸೌಕರ್ಯವನ್ನು ಒದಗಿಸುವುದು ಹಾಗೂ ಈಕ್ವಿಟಿಯಲ್ಲಿ ಭಾಗವಹಿಸುವುದು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಮೂಲಭೂತ ಒಪ್ಪಿಗೆಗಳನ್ನು ಪಡೆಯಲು ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯನ್ನು 'ಬಿಲ್ಡ್-ಓನ್-ಆಪರೇಟ್' ಆಧಾರದ ಮೇಲೆ ಖಾಸಗಿ ಸಂಘದವರಿಗೆ ನಿರ್ವಹಿಸಲು ಒಪ್ಪಿಸಲಾಗಿದೆ.

ವಿಷಯ:- ಕೆ.ಐ.ಎ.ಡಿ.ಬಿ.ಯವರು ಬೆಂಗಳೂರು ಉತ್ತರ ತಾಲ್ಲೂಕಿನ ಮೀನ ಕುಂಟೆ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 506 (937)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಐಎಡಿಬಿ.ಯವರು ಬೆಂಗಳೂರು ಉತ್ತರ ತಾಲ್ಲೂಕಿನ ಮೀನಕುಂಟೆ ಗ್ರಾಮದಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಇದನ್ನು ಯಾವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಸದರಿ ಜಮೀನನ್ನು ಯಾರಿಗೆ ಮಂಜೂರು ಮಾಡಲಾಗಿದೆ?

ಇ) ಸದರಿ ಭೂಮಾಲೀಕರುಗಳಿಗೆ ನ್ಯಾಯಸಮ್ಮತವಾದ ಸಕಾಲಿಕ ಪರಿಹಾರವನ್ನು ನೀಡಲಾಗಿದೆಯೇ ಹಾಗೂ ಅದರ ಒಟ್ಟು ಮೊತ್ತ ಎಷ್ಟು?

ಈ) ಸದರಿ ಭೂಮಿಯ ಭೂಮಾಲೀಕರುಗಳು ಭೂಸ್ವಾಧೀನಕ್ಕೆ ತಮ್ಮ ಪೂರ್ಣ